**ಪಿಡಬ್ಲ್ಯೂ:1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ದಿಃ 07-05-2024**

ಮುಂದುವರಿದ ಪಾಟೀ ಸವಾಲು : ಆರೋಪಿ ಪರಃ ಶ್ರೀ ಎಸ್ ಎಮ್ ಜೆ ವಕೀಲರಿಂದಃ

ಲೇವಾದೇವಿ ವ್ಯವಹಾರ ಮಾಡಲು ಪರವಾನಿಗೆ ಇದೆಯಾ ಎಂದರೆ ನಾನು ಲೇವಾದೇವಿ ವ್ಯವಹಾರ ಮಾಡುವುದಿಲ್ಲ. ರೂ. 1,50,000/- ನನಗೆ ಸಣ್ಣ ಮೊತ್ತ. ಆರೋಪಿಗೆ ಹಣವನ್ನು ಸಾಲ ಕೊಡುವಾಗ ನಾನು ಆರೋಪಿಯೊಂದಿಗೆ ಕರಾರನ್ನು ಮಾಡಿಕೊಂಡಿರುವುದಿಲ್ಲ. ಕರಾರನ್ನು ಏಕೆ ಮಾಡಿಕೊಂಡಿರುವುದಿಲ್ಲ ಎಂದರೆ ಆರೋಪಿಯ ಮೇಲೆ ವಿಶ್ವಾಸ ಇತ್ತು. ಆರೋಪಿ ನನ್ನ ಕಲ್ಲಿನ ಕ್ವಾರೆಯಲ್ಲಿ ಸುಮಾರು 10 ವರ್ಷಗಳಿಂದ ಆಗಾಗ್ಗೆ ಬಂದು ಹೋಗಿ ದಿನಗೂಲಿ ಕೆಲಸ ಮಾಡುತ್ತಾರೆ. ಯಾವ ವರ್ಷಗಳಿಂದ ಆ ರೀತಿ ಬಂದು ಹೋಗುತ್ತಾರೆ ಎಂದು ನೆನಪಿಲ್ಲ. ನನ್ನ ಬಳಿ ಯಾವ ಸಮಯದಿಂದ ಕೆಲಸ ಮಾಡಲು ಬರುವುದಕ್ಕೆ ನಿಲ್ಲಿಸಿರುತ್ತಾರೆ ಎಂದು ನೆನಪಿರುವುದಿಲ್ಲ. ಆರೋಪಿಗೆ ಮೂಗ ಮತ್ತು ಕಿವುಡರಾಗಿರುತ್ತಾರೆ ಎಂದರೆ ಸರಿ. ಆರೋಪಿ ಉತ್ತಮ ಕೆಲಸಗಾರರು ಎಂದರೆ ಸಾಧರಣಾ ಕೆಲಸಗಾರರು. ಆರೋಪಿಗೆ ಹಣದ ಮುಖಬೆಲೆ ಗೊತ್ತಾಗುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿ ಮತ್ತು ಅವರ ಹೆಂಡತಿ ನನ್ನ ಮನೆಗೆ ಬಂದು ನಮಗೆ ಸ್ವಲ್ಪ ಹಣದ ಅವಶ್ಯಕತೆ ಇದೆ ಎಂದು ಹಣವನ್ನು ಕೇಳಿರುತ್ತಾರೆ. ರೂ. 1,50,000/- ಕೇಳಿರುತ್ತಾರೆ. ಆರೋಪಿ ಹಣವನ್ನು ಕೇಳಿದ 2 ದಿನಗಳ ನಂತರ ಹಣವನ್ನು ನನ್ನ

ಮನೆಯಲ್ಲಿಯೇ ಹಣವನ್ನು ಕೊಟ್ಟಿರುತ್ತೇನೆ. ಆ ಸಮಯದಲ್ಲಿ ಆರೋಪಿ ಹಾಗೂ ಅವರ ಹೆಂಡತಿ ಇಬ್ಬರು ಇದ್ದರು. ಹಣವನ್ನು ಆರೋಪಿಯ ಕೈಗೆ ಕೊಟ್ಟಿರುತ್ತೇನೆ.

1,50,000/- ಹಣವನ್ನು ನಮ್ಮ ಮನೆಯಲ್ಲಿ ಇತ್ತು. 1,50,000/- ಹಣ 500 ಮುಖಬೆಲೆಯ ನೋಟುಗಳಾಗಿದ್ದು ಒಟ್ಟು 300 ಇದ್ದವು. ಹಣವನ್ನು 2 ತಿಂಗಳ ನಂತರ ಮರುಪಾವತಿಸುವುದಾಗಿ ಹೇಳಿದ್ದರು. ಚೆಕ್ಕನ್ನು ಹಣ ತೆಗೆದುಕೊಳ್ಳುವಾಗ ನನ್ನ ಮನೆಯಲ್ಲಿ ಕೊಟ್ಟಿರುತ್ತಾರೆ. ಚೆಕ್ಕನ್ನು ಆರೋಪಿಯೇ ಬರೆದುಕೊಟ್ಟಿರುತ್ತಾರೆ. ನನ್ನ ಸಮಕ್ಷಮದಲ್ಲಿ ಬರೆದಿರುವುದಿಲ್ಲ. ಆರೋಪಿ ಕೆಲಸ ಮಾಡುವಾಗ ಇನ್ನಿತರರ 5-6 ಜನ ಕೆಲಸ ಮಾಡುತ್ತಿದ್ದರು ಅವರ ಹೆಸರುಗಳು ನೆನಪಿರುವುದಿಲ್ಲ. 5-6 ಜನರ ಜೊತೆ ಕೆಲಸ ಮಾಡುತ್ತಿದ್ದವರ ಪೈಕಿ ಆರೋಪಿಯ ತಮ್ಮನು ಕೂಡ ಮೂಗ ಮತ್ತು ಕಿವುಡನಾಗಿರುತ್ತಾರೆ. ಆರೋಪಿ ನನ್ನ ಬಳಿ ಕೆಲಸ ಮಾಡುವ ಸಮಯದಲ್ಲಿ ನಾನು ಅವರನ್ನು ಕುಕ್ಕುಂದೂರಿನ ವಿಜಯ ಬ್ಯಾಂಕಿಗೆ ಕರೆದುಕೊಂಡು ಹೋಗಿ ಚೆಕ್ಕು ನಂಬರ್ 201251 ರಿಂದ 201275 ರವರೆಗಿನ ಸುಮಾರು 25 ಚೆಕ್ಕು ಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಚೆಕ್ಕುಗಳ ಪೈಕಿ ಚೆಕ್ಕು ನಂಬರ್ 201251 ಮತ್ತು 201252 ಅನ್ನು ಅವರಿಗೆ ತಿಳಿಯದ ಹಾಗೇ ನಾನು ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ಅನ್ನು ನಾನೇ ಬರೆದು ಆರೋಪಿಯ ಸಹಿಯನ್ನು forgery ಮಾಡಿ ಅದನ್ನು ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಚೆಕ್ಕು 201252 ಈಗಲೂ ನನ್ನ ಬಳಿ ಇದೆ ಎಂದರೆ ಸರಿಯಲ್ಲ. ಆರೋಪಿ ಉತ್ತಮ ಕೆಲಸಗಾರನಾಗಿದ್ದು ನನ್ನ ಬಳಿ ಕೆಲಸವನ್ನು ಬಿಟ್ಟು ಹೋಗಬಾರದು ಎಂಬ ಉದ್ದೇಶದಿಂದ ಆರೋಪಿಯನ್ನು ಹೆದರಿಸುವುದಕ್ಕಾಗಿ ಆರೋಪಿಯ ಮೇಲೆ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಕ್ವಾರೆಯನ್ನು ಆರೋಪಿ ಕೆಲಸ ಮಾಡುವ ಸಮಯದಲ್ಲಿ ಅನಧಿಕೃತವಾಗಿ ನಡೆಸುತ್ತಿದ್ದು ಇಲಾಖಾಧಿಕಾರಿಗಳು ಆ ವಿಚಾರವಾಗಿ ಸಾಕಷ್ಟು ಬಾಗಿ ಆರೋಪಿಯನ್ನು ಬಂಧಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ವಿರುದ್ದ ಸಿಸಿ ನಂಬರ್

**51/2018** ದಾಖಲಾದ ನಂತರ ಆರೋಪಿಯು ನನ್ನದು ಅನಧೀಕೃತ ಕ್ವಾರೆಯಾಗಿದ್ದು ಬಂದರೆ ಪೋಲಿಸರು ಬಂಧಿಸುತ್ತಾರೆ ಎಂಬ ಭಯದಿಂದ ನನ್ನ ಬಳಿ ಕೆಲಸಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಆರೋಪಿಯ ವಿರುದ್ದ ಯಾವುದೇ ದೂರು ದಾಖಲಿಸಿರುವುದಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ., ಕಾರ್ಕಳ